ಸೂ. 75 | **39. ಅಝ್ಝುಮರ್** | ರು. 8

سُوْرَةُ الزُّمَرِ مَكِّيَّةٌ

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಈ ಗ್ರಂಥದ ಅವತೀರ್ಣವು ಪ್ರಬಲನೂ ಯುಕ್ತಿಪೂರ್ಣನೂ ಆದ ಅಲ್ಲಾಹನ ಕಡೆಯಿಂದಾಗಿರುತ್ತದೆ.

تَنْزِيْلُ الْكِتٰبِ مِنَ اللّٰهِ الْعَزِيْزِ الْحَكِيْمِ ①

2. (ಸಂದೇಶವಾಹಕರೇ) ಈ ಗ್ರಂಥವನ್ನು ನಾವು ನಿಮ್ಮ ಕಡೆಗೆ ಪರಮ ಸತ್ಯವಾಗಿ ಅವತೀರ್ಣಗೊಳಿಸಿರುತ್ತೇವೆ. ಆದುದರಿಂದ ನೀವು ಧರ್ಮವನ್ನು ಅಲ್ಲಾಹನಿಗಾಗಿಯೇ ಮೀಸಲಿರಿಸುತ್ತ ಅವನ ದಾಸ್ಯವನ್ನೇ ಮಾಡಿರಿ.

اِنَّاۤ اَنْزَلْنَاۤ اِلَيْكَ الْكِتٰبَ بِالْحَقِّ
فَاعْبُدِ اللّٰهَ مُخْلِصًا لَّهُ الدِّيْنَ ②

3. ಎಚ್ಚರಿಕೆ! ಧರ್ಮವು ನಿಷ್ಕಳಂಕವಾಗಿ ಕೇವಲ ಅಲ್ಲಾಹನ ಹಕ್ಕಾಗಿದೆ. ಇನ್ನು ಅವನ ಹೊರತು ಇತರರನ್ನು ರಕ್ಷಕ ಮಿತ್ರರಾಗಿ ಮಾಡಿ ಕೊಂಡವರ ವಿಷಯ- "ಅವರು ನಮ್ಮನ್ನು ಅಲ್ಲಾಹನಿಗೆ ನಿಕಟ ಗೊಳಿಸಲಿಕ್ಕಾಗಿ ಮಾತ್ರ ನಾವು ಅವರ ಆರಾಧನೆ ಮಾಡುತ್ತೇವೆ" (ಎಂದು ಅವರು ವಾದಿಸುತ್ತಾರೆ.) ಖಂಡಿತವಾಗಿಯೂ ಅಲ್ಲಾಹನು ಅವರು ಭಿನ್ನತೆ ತೋರಿದ ಎಲ್ಲ ವಿಷಯಗಳ ತೀರ್ಮಾನ ಮಾಡಿ ಬಿಡುವನು. ಸುಳ್ಳುಗಾರನೂ ಸತ್ಯನಿಷೇಧಿಯೂ ಆಗಿರುವಂತಹವನಿಗೆ ಅಲ್ಲಾಹನು ಸನ್ಮಾರ್ಗದರ್ಶನವೀಯುವುದಿಲ್ಲ.

اَلَا لِلّٰهِ الدِّيْنُ الْخَالِصُ ؕ وَالَّذِيْنَ
اتَّخَذُوْا مِنْ دُوْنِهٖۤ اَوْلِيَآءَ ۘ مَا نَعْبُدُهُمْ
اِلَّا لِيُقَرِّبُوْنَاۤ اِلَى اللّٰهِ زُلْفٰى ؕ اِنَّ اللّٰهَ
يَحْكُمُ بَيْنَهُمْ فِيْ مَا هُمْ فِيْهِ يَخْتَلِفُوْنَ ۬ؕ
اِنَّ اللّٰهَ لَا يَهْدِيْ مَنْ هُوَ كٰذِبٌ كَفَّارٌ ③

4. ಅಲ್ಲಾಹನು ಯಾರನ್ನಾದರೂ ಪುತ್ರನಾಗಿ ಮಾಡಿಕೊಳ್ಳಲು ಇಚ್ಛಿಸುತ್ತಿದ್ದರೆ, ತನ್ನ ಸೃಷ್ಟಿಯಲ್ಲಿ ತಾನಿಚ್ಛಿಸಿದವರನ್ನು ಪುನೀತನಾಗಿ ಮಾಡಿಕೊಳ್ಳುತ್ತಿದ್ದನು. ಅವನು(ಪುತ್ರನನ್ನಿರಿಸಿಕೊಳ್ಳುವುದರಿಂದ) ಪರಿಶುದ್ಧನಾಗಿರುತ್ತಾನೆ. ಅವನು ಅಲ್ಲಾಹನು, ಏಕೈಕನು ಮತ್ತು ಎಲ್ಲರ ಮೇಲೆ ಪ್ರಾಬಲ್ಯವುಳ್ಳವನು.

لَوْ اَرَادَ اللّٰهُ اَنْ يَّتَّخِذَ وَلَدًا لَّاصْطَفٰى
مِمَّا يَخْلُقُ مَا يَشَآءُ ۙ سُبْحٰنَهٗ ؕ هُوَ اللّٰهُ
الْوَاحِدُ الْقَهَّارُ ④

5. ಅವನು ಭೂಮಿ-ಆಕಾಶಗಳನ್ನು ಸತ್ಯಪೂರ್ಣವಾಗಿ ಸೃಷ್ಟಿಸಿರುವನು.

خَلَقَ السَّمٰوٰتِ وَالْاَرْضَ بِالْحَقِّ ۚ

ಅವನೇ ಹಗಲಿನ ಮೇಲೆ ಇರುಳನ್ನೂ ಇರುಳಿನ ಮೇಲೆ ಹಗಲನ್ನೂ ಸುತ್ತುತ್ತಾನೆ. ಅವನೇ ಸೂರ್ಯ ಮತ್ತು ಚಂದ್ರನನ್ನು ನಿಯಂತ್ರಿಸಿರುತ್ತಾನೆ. ಅವುಗಳಲ್ಲಿ ಪ್ರತಿಯೊಂದೂ ಒಂದು ನಿರ್ದಿಷ್ಟ ಕಾಲದ ವರೆಗೆ ಚಲಿಸುತ್ತಿರುವುದು. ಅವನು ಪ್ರಬಲನೂ ಮಹಾ ಕ್ಷಮಾಶೀಲನೂ ಆಗಿರುತ್ತಾನೆಂಬುದನ್ನು ತಿಳಿದುಕೊಳ್ಳಿರಿ.

يُكَوِّرُ الَّيْلَ عَلَى النَّهَارِ وَيُكَوِّرُ
النَّهَارَ عَلَى الَّيْلِ وَسَخَّرَ الشَّمْسَ
وَالْقَمَرَ ۖ كُلٌّ يَّجْرِيْ لِاَجَلٍ مُّسَمًّى ۗ
اَلَا هُوَ الْعَزِيْزُ الْغَفَّارُ ۝٥

6. ಅವನೇ ನಿಮ್ಮನ್ನು ಒಂದೇ ಜೀವದಿಂದ ಸೃಷ್ಟಿಸಿದನು. ತರುವಾಯ ಆ ಜೀವದಿಂದ ಅದರ ಜೊತೆಯನ್ನು ಸೃಷ್ಟಿಸಿದವನೂ ಅವನೇ ಮತ್ತು ನಿಮ್ಮ ಜಾನುವಾರುಗಳಿಂದ ನಿಮಗಾಗಿ ಎಂಟು ಗಂಡು-ಹೆಣ್ಣುಗಳನ್ನು ಒದಗಿಸಿದವನೂ ಅವನೇ.[1] ಅವನು ನಿಮ್ಮ ಮಾತೆಯರ ಉದರಗಳೊಳಗೆ, ಮೂರು ಕತ್ತಲು ಪರದೆಗಳೊಳಗೆ (ನಿಮಗೆ) ಒಂದರ ನಂತರ ಒಂದು ರೂಪ ಕೊಡುತ್ತಾ ಸಾಗುತ್ತಾನೆ.[2] (ಇವೆಲ್ಲ ಕಾರ್ಯಗಳನ್ನು ಮಾಡುತ್ತಿರುವ) ಈ ಅಲ್ಲಾಹನೇ ನಿಮ್ಮ ಪಾಲಕ ಪ್ರಭು. ಪ್ರಭುತ್ವವು ಅವನಿಗೇ ಸೇರಿದೆ. ಅವನ ಹೊರತು ಯಾವ ಆರಾಧ್ಯನೂ ಇಲ್ಲ. ಹೀಗಿರುತ್ತ ನೀವು ಅದೆಲ್ಲಿಂದ ದಾರಿಗೆಡಿಸಲ್ಪಡುತ್ತಿರುವಿರಿ?

خَلَقَكُمْ مِّنْ نَّفْسٍ وَّاحِدَةٍ ثُمَّ جَعَلَ
مِنْهَا زَوْجَهَا وَاَنْزَلَ لَكُمْ مِّنَ الْاَنْعَامِ
ثَمٰنِيَةَ اَزْوَاجٍ ۗ يَخْلُقُكُمْ فِيْ بُطُوْنِ
اُمَّهٰتِكُمْ خَلْقًا مِّنْۢ بَعْدِ خَلْقٍ فِيْ
ظُلُمٰتٍ ثَلٰثٍ ۗ ذٰلِكُمُ اللّٰهُ رَبُّكُمْ لَهُ
الْمُلْكُ ۗ لَاۤ اِلٰهَ اِلَّا هُوَ ۚ فَاَنّٰى تُصْرَفُوْنَ ۝٦

7. ನೀವು ಸತ್ಯವನ್ನು ನಿಷೇಧಿಸಿದರೆ, ಅಲ್ಲಾಹನು ನಿಮ್ಮಿಂದ ನಿರಪೇಕ್ಷನಾಗಿದ್ದಾನೆ. ಆದರೆ ಅವನು ತನ್ನ ದಾಸರ ಪಾಲಿಗೆ ಸತ್ಯನಿಷೇಧವನ್ನು ಮೆಚ್ಚುವುದಿಲ್ಲ ಮತ್ತು ನೀವು ಕೃತಜ್ಞರಾದರೆ ಅದನ್ನು ಅವನು ನಿಮ್ಮ ಪಾಲಿಗೆ ಮೆಚ್ಚುತ್ತಾನೆ. ಹೊರೆ ಹೊರುವವನಾರೂ ಇನ್ನೊಬ್ಬನ ಹೊರೆಯನ್ನು ಹೊರಲಾರನು. ಕೊನೆಗೆ ನಿಮಗೆಲ್ಲರಿಗೂ ನಿಮ್ಮ ಪ್ರಭುವಿನ ಕಡೆಗೇ ಮರಳಲಿಕ್ಕಿದೆ. ನೀವು ಏನು ಮಾಡುತ್ತಿದ್ದಿರೆಂದು ಆಗ ಅವನು ನಿಮಗೆ ತೋರಿಸಿ ಬಿಡುವನು. ಅವನಂತು ಮನದೊಳಗಿನ ಸಂಗತಿಯನ್ನೂ ಬಲ್ಲವನಾಗಿರುತ್ತಾನೆ.

اِنْ تَكْفُرُوْا فَاِنَّ اللّٰهَ غَنِيٌّ عَنْكُمْ ۗ وَلَا
يَرْضٰى لِعِبَادِهِ الْكُفْرَ ۚ وَاِنْ تَشْكُرُوْا
يَرْضَهُ لَكُمْ ۗ وَلَا تَزِرُ وَازِرَةٌ وِّزْرَ
اُخْرٰى ۗ ثُمَّ اِلٰى رَبِّكُمْ مَّرْجِعُكُمْ فَيُنَبِّئُكُمْ
بِمَا كُنْتُمْ تَعْمَلُوْنَ ۗ اِنَّهٗ عَلِيْمٌۢ
بِذَاتِ الصُّدُوْرِ ۝٧

8. ಮನುಷ್ಯನಿಗೇನಾದರೂ ವಿಪತ್ತು ಬಂದೆರಗಿದಾಗ ಅವನು ತನ್ನ ಪ್ರಭುವಿನ ಕಡೆಗೆ ಮರಳಿ ಅವನನ್ನು ಪ್ರಾರ್ಥಿಸುತ್ತಾನೆ. ತರುವಾಯ ಅವನ ಪ್ರಭು ಅವನನ್ನು ತನ್ನ ಕೊಡುಗೆಯಿಂದ ಅನುಗ್ರಹಿಸಿದಾಗ ಅವನು, ಹಿಂದೆ ತಾನು ಯಾವ ಸಂಕಷ್ಟದ ಬಗ್ಗೆ ಪ್ರಾರ್ಥಿಸಿದ್ದನೋ ಅದನ್ನು ಮರೆತು ಬಿಡುತ್ತಾನೆ ಮತ್ತು ಅಲ್ಲಾಹನ ಮಾರ್ಗದಿಂದ ಭ್ರಷ್ಟಗೊಳಿಸಲಿಕ್ಕಾಗಿ ಇತರರನ್ನು ಅವನ ಸಮಾನರೆಂದು

وَاِذَا مَسَّ الْاِنْسَانَ ضُرٌّ دَعَا رَبَّهٗ
مُنِيْبًا اِلَيْهِ ثُمَّ اِذَا خَوَّلَهٗ نِعْمَةً مِّنْهُ
نَسِيَ مَا كَانَ يَدْعُوْۤا اِلَيْهِ مِنْ قَبْلُ
وَجَعَلَ لِلّٰهِ اَنْدَادًا لِّيُضِلَّ عَنْ سَبِيْلِهٖ ۗ
قُلْ تَمَتَّعْ بِكُفْرِكَ قَلِيْلًا ۖ اِنَّكَ مِنْ

1. ಜಾನುವಾರುಗಳೆಂದರೆ ಒಂಟೆ, ದನ, ಆಡು ಮತ್ತು ಕುರಿ. ಅದರ ನಾಲ್ಕು ಜತೆಗಳು ಸೇರಿದರೆ ಎಂಟು ಗಂಡು-ಹೆಣ್ಣುಗಳಾಗುತ್ತವೆ.
2. ಮೂರು ಪರದೆಗಳೆಂದರೆ ಹೊಟ್ಟೆ, ಗರ್ಭಕೋಶ ಮತ್ತು ಭ್ರೂಣವನ್ನು ಸುತ್ತುವರಿದಿರುವ ಪೊರೆ.

أَصْحَٰبِ ٱلنَّارِ ﴿٨﴾

ಪರಿಗಣಿಸುತ್ತಾನೆ. (ಸಂದೇಶವಾಹಕರೇ) "ಸ್ವಲ್ಪ ಕಾಲ ನಿನ್ನ ಸತ್ಯ ನಿಷೇಧವನ್ನು ಆಸ್ವದಿಸುತ್ತಿರು, ಖಂಡಿತವಾಗಿಯೂ ನೀನು ನರಕಕ್ಕೆ ಹೋಗುವವನಾಗಿರುವೆ"- ಎಂದು ಅವನೊಡನೆ ಹೇಳಿರಿ.

أَمَّنْ هُوَ قَٰنِتٌ ءَانَآءَ ٱلَّيْلِ سَاجِدًا وَقَآئِمًا يَحْذَرُ ٱلْءَاخِرَةَ وَيَرْجُوا۟ رَحْمَةَ رَبِّهِۦ ۗ قُلْ هَلْ يَسْتَوِى ٱلَّذِينَ يَعْلَمُونَ وَٱلَّذِينَ لَا يَعْلَمُونَ ۗ إِنَّمَا يَتَذَكَّرُ أُو۟لُوا۟ ٱلْأَلْبَٰبِ ﴿٩﴾

9. (ಇವನ ನಿಲುಮೆ ಸರಿಯೋ ಅಥವಾ) ಆಜ್ಞಾಪಾಲಕನಾಗಿರುವ, ರಾತ್ರಿಯ ಜಾವಗಳಲ್ಲಿ (ನಮಾಝ್‌ಗೆ) ನಿಲ್ಲುವ, ಸಾಷ್ಟಾಂಗವೆರಗುವ, ಪರಲೋಕವನ್ನು ಭಯಪಡುವ ಮತ್ತು ತನ್ನ ಪ್ರಭುವಿನ ಕೃಪೆಯನ್ನು ನಿರೀಕ್ಷಿಸುವ ವ್ಯಕ್ತಿಯ (ನಿಲುಮೆ ಸರಿಯೋ)? ಜ್ಞಾನಿಗಳು ಮತ್ತು ಅಜ್ಞಾನಿಗಳು ಇವರಿಬ್ಬರೂ ಎಂದಾದರೂ ಸರಿಸಮಾನರಾಗಬಲ್ಲರೇ? ಎಂದು ಇವರೊಡನೆ ಕೇಳಿರಿ. ಬುದ್ಧಿಜೀವಿಗಳು ಮಾತ್ರ ಉಪದೇಶ ಸ್ವೀಕರಿಸುತ್ತಾರೆ.

قُلْ يَٰعِبَادِ ٱلَّذِينَ ءَامَنُوا۟ ٱتَّقُوا۟ رَبَّكُمْ ۚ لِلَّذِينَ أَحْسَنُوا۟ فِى هَٰذِهِ ٱلدُّنْيَا حَسَنَةٌ ۗ وَأَرْضُ ٱللَّهِ وَٰسِعَةٌ ۗ إِنَّمَا يُوَفَّى ٱلصَّٰبِرُونَ أَجْرَهُم بِغَيْرِ حِسَابٍ ﴿١٠﴾

10. (ಸಂದೇಶವಾಹಕರೇ) ಹೇಳಿರಿ- "ಸತ್ಯವಿಶ್ವಾಸಿಗಳಾದ ನನ್ನ ದಾಸರೇ! ನಿಮ್ಮ ಪ್ರಭುವನ್ನು ಭಯಪಡಿರಿ. ಈ ಲೋಕದಲ್ಲಿ ಒಳಿತಿನ ನಿಲುಮೆಯನ್ನಿರಿಸಿಕೊಂಡವರಿಗೆ ಹಿತವಿದೆ ಮತ್ತು ಅಲ್ಲಾಹನ ಭೂಮಿ ವಿಶಾಲವಾಗಿದೆ.[3] ತಾಳ್ಮೆ ವಹಿಸುವವರಿಗೆ ಅವರ ಪ್ರತಿಫಲವನ್ನು ಅಗಣಿತವಾಗಿ ಕೊಡಲಾಗುವುದು."

قُلْ إِنِّىٓ أُمِرْتُ أَنْ أَعْبُدَ ٱللَّهَ مُخْلِصًا لَّهُ ٱلدِّينَ ﴿١١﴾

11. (ಸಂದೇಶವಾಹಕರೇ) ಇವರೊಡನೆ ಹೇಳಿರಿ- ಧರ್ಮವನ್ನು ನಿಷ್ಕಳಂಕವಾಗಿ ಅಲ್ಲಾಹನಿಗೇ ಮೀಸಲಾಗಿಟ್ಟು ಅವನ ದಾಸ್ಯ ಮಾಡಬೇಕೆಂದು ನನಗೆ ಅಪ್ಪಣೆ ಕೊಡಲಾಗಿದೆ-

وَأُمِرْتُ لِأَنْ أَكُونَ أَوَّلَ ٱلْمُسْلِمِينَ ﴿١٢﴾

12. ಮತ್ತು ಎಲ್ಲರಿಗಿಂತಲೂ ಮೊದಲು ನಾನು ಸ್ವತಃ ಮುಸ್ಲಿಮನಾಗಬೇಕೆಂದು ನನಗೆ ಆಜ್ಞಾಪಿಸಲಾಗಿದೆ.

قُلْ إِنِّىٓ أَخَافُ إِنْ عَصَيْتُ رَبِّى عَذَابَ يَوْمٍ عَظِيمٍ ﴿١٣﴾

13. ಹೇಳಿರಿ- ನಾನು ನನ್ನ ಪ್ರಭುವಿನ ಆಜ್ಞೋಲ್ಲಂಘನೆ ಮಾಡಿದರೆ, ನನಗೆ ಒಂದು ಮಹಾದಿನದ ಯಾತನೆಯ ಭಯವಿದೆ.

قُلِ ٱللَّهَ أَعْبُدُ مُخْلِصًا لَّهُۥ دِينِى ﴿١٤﴾

14. ಹೇಳಿರಿ- ನಾನಂತು ನನ್ನ ಧರ್ಮವನ್ನು ನಿಷ್ಕಳಂಕವಾಗಿ ಅಲ್ಲಾಹನಿಗೆ ಮೀಸಲಾಗಿಟ್ಟು ಅವನದೇ ದಾಸ್ಯ ಮಾಡುವೆನು.

فَٱعْبُدُوا۟ مَا شِئْتُم مِّن دُونِهِۦ ۗ قُلْ إِنَّ ٱلْخَٰسِرِينَ ٱلَّذِينَ خَسِرُوٓا۟ أَنفُسَهُمْ

15. ನೀವು ಅವನ ಹೊರತು ಯಾರೆಲ್ಲರ ದಾಸ್ಯ-ಆರಾಧನೆ ಮಾಡಲಿಚ್ಛಿಸುತ್ತೀರೋ ಮಾಡುತ್ತಲಿರಿ. ಹೇಳಿರಿ- ವಾಸ್ತವದಲ್ಲಿ

3. ಅರ್ಥಾತ್- ಅಲ್ಲಾಹನ ದಾಸ್ಯ-ಆರಾಧನೆ ಕೈಗೊಳ್ಳಲು ಒಂದು ಸ್ಥಳ ದುಸ್ತರವಾದರೆ, ಅಂತಹ ಸಂಕಷ್ಟಗಳಿಲ್ಲದ ಇನ್ನೊಂದು ಸ್ಥಳಕ್ಕೆ ಹೋಗಿ ಬಿಡಿರಿ.

ಪುನರುತ್ಥಾನ ದಿನ ತನ್ನನ್ನೂ ತನ್ನವರನ್ನೂ ನಷ್ಟಕ್ಕೊಳಪಡಿಸಿ
ಕೊಂಡವರೇ ನಿಜವಾದ ದಿವಾಳಿಕೋರರು. ಚೆನ್ನಾಗಿ ತಿಳಿದಿರಿ,
ಇದುವೇ ಸುಸ್ಪಷ್ಟ ದಿವಾಳಿಕೋರತನವಾಗಿದೆ.

وَأَهْلِيهِمْ يَوْمَ الْقِيَامَةِ ۗ أَلَا ذَٰلِكَ هُوَ
الْخُسْرَانُ الْمُبِينُ ﴿١٥﴾

16. ಅಗ್ನಿಯ ಕೊಡೆಗಳು ಅವರ ಮೇಲ್ಭಾಗದಲ್ಲೂ ಹರಡಿಕೊಂಡಿರು
ವುವು ಮತ್ತು ಕೆಳಭಾಗದಲ್ಲೂ ಹರಡಿಕೊಂಡಿರುವುವು. ಅಲ್ಲಾಹನು
ತನ್ನ ದಾಸರನ್ನು ಎಚ್ಚರಿಸುತ್ತಿರುವುದು ಈ ಅಂತಿಮ ಗತಿಯ
ಕುರಿತೇ ಆಗಿದೆ. ಆದುದರಿಂದ, "ನನ್ನ ದಾಸರೇ ನನ್ನ ಕ್ರೋಧವನ್ನು
ಭಯಪಡಿರಿ.

لَهُم مِّن فَوْقِهِمْ ظُلَلٌ مِّنَ النَّارِ وَ
مِن تَحْتِهِمْ ظُلَلٌ ۚ ذَٰلِكَ يُخَوِّفُ اللَّهُ
بِهِ عِبَادَهُ ۚ يَا عِبَادِ فَاتَّقُونِ ﴿١٦﴾

17-18. ಇದಕ್ಕೆ ವ್ಯತಿರಿಕ್ತವಾಗಿ 'ತಾಗೂತ್'ನ ದಾಸ್ಯದಿಂದ ಮುಕ್ತರಾಗಿ
ಅಲ್ಲಾಹನ ಕಡೆಗೆ ಮರಳುವವರಿಗೆ ಶುಭವಾರ್ತೆಯಿದೆ. ಆದುದ
ರಿಂದ (ಪೈಗಂಬರರೇ) ಮಾತನ್ನು ಚೆನ್ನಾಗಿ ಆಲಿಸುವ ಹಾಗೂ
ಅದರ ಅತ್ಯುತ್ತಮ ಭಾಗವನ್ನು ಅನುಸರಿಸುವ ನನ್ನ ದಾಸರಿಗೆ
ಶುಭವಾರ್ತೆ ನೀಡಿರಿ. ಇವರೇ ಅಲ್ಲಾಹನಿಂದ ಸನ್ಮಾರ್ಗ
ನೀಡಲ್ಪಟ್ಟವರು ಮತ್ತು ಇವರೇ ಬುದ್ಧಿವಂತರು.

وَالَّذِينَ اجْتَنَبُوا الطَّاغُوتَ أَن يَعْبُدُوهَا
وَأَنَابُوا إِلَى اللَّهِ لَهُمُ الْبُشْرَىٰ ۚ فَبَشِّرْ عِبَادِ ﴿١٧﴾
الَّذِينَ يَسْتَمِعُونَ الْقَوْلَ فَيَتَّبِعُونَ
أَحْسَنَهُ ۚ أُولَٰئِكَ الَّذِينَ هَدَاهُمُ اللَّهُ
وَأُولَٰئِكَ هُمْ أُولُو الْأَلْبَابِ ﴿١٨﴾

19. (ಪೈಗಂಬರರೇ) ಯಾರ ಮೇಲೆ ಅಲ್ಲಾಹನ ಯಾತನೆಯ
ತೀರ್ಮಾನವು ಅನ್ವಯಿಸಿ ಬಿಟ್ಟಿದೆಯೋ ಅವನನ್ನು ರಕ್ಷಿಸುವವ
ನಾರು? ಅಗ್ನಿಯಲ್ಲಿ ಬಿದ್ದುಬಿಟ್ಟಿರುವವನನ್ನು ನೀವು ರಕ್ಷಿಸಬಲ್ಲಿರಾ?

أَفَمَنْ حَقَّ عَلَيْهِ كَلِمَةُ الْعَذَابِ ۖ
أَفَأَنتَ تُنقِذُ مَن فِي النَّارِ ﴿١٩﴾

20. ಆದರೆ ತಮ್ಮ ಪ್ರಭುವನ್ನು ಭಯಪಡುತ್ತಿದ್ದವರಿಗಾಗಿ ಅಂತಸ್ತಿನ
ಮೇಲೆ ಅಂತಸ್ತಿರುವ ಉನ್ನತ ಭವನಗಳಿರುವುವು. ಅವುಗಳ
ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವವು. ಇದು ಅಲ್ಲಾಹನ
ವಾಗ್ದಾನ. ಅಲ್ಲಾಹನು ತನ್ನ ವಾಗ್ದಾನವನ್ನೆಂದೂ ಉಲ್ಲಂಘಿಸುವು
ದಿಲ್ಲ.

لَٰكِنِ الَّذِينَ اتَّقَوْا رَبَّهُمْ لَهُمْ غُرَفٌ
مِّن فَوْقِهَا غُرَفٌ مَّبْنِيَّةٌ تَجْرِي
مِن تَحْتِهَا الْأَنْهَارُ ۖ وَعْدَ اللَّهِ ۖ لَا
يُخْلِفُ اللَّهُ الْمِيعَادَ ﴿٢٠﴾

21. ನೀವು ನೋಡುತ್ತಿಲ್ಲವೇ? ಅಲ್ಲಾಹನು ಆಕಾಶದಿಂದ ನೀರು
ಸುರಿಸಿದನು. ಅನಂತರ ಅದನ್ನು ಚಿಲುಮೆ ಮತ್ತು ನದಿಗಳ[4]
ರೂಪದಲ್ಲಿ ಭೂಮಿಯೊಳಗೆ ಹರಿಸಿದನು. ತರುವಾಯ ಆ
ನೀರಿನ ಮೂಲಕ ಅವನು ವಿವಿಧ ಜಾತಿಯ ವಿಭಿನ್ನ ಬೆಳೆಗಳನ್ನು
ಹೊರ ತೆಗೆಯುತ್ತಾನೆ. ಅನಂತರ ಆ ಬೆಳೆಗಳು ಹಣ್ಣಾಗಿ
ಒಣಗುತ್ತವೆ. ಆಗ ಅವು ಹಳದಿಯಾಗಿ ಬಿಡುವುದನ್ನು ನೀವು

أَلَمْ تَرَ أَنَّ اللَّهَ أَنزَلَ مِنَ السَّمَاءِ مَاءً
فَسَلَكَهُ يَنَابِيعَ فِي الْأَرْضِ ثُمَّ يُخْرِجُ بِهِ
زَرْعًا مُّخْتَلِفًا أَلْوَانُهُ ثُمَّ يَهِيجُ فَتَرَاهُ
مُصْفَرًّا ثُمَّ يَجْعَلُهُ حُطَامًا ۚ إِنَّ فِي ذَٰلِكَ

4. ಮೂಲದಲ್ಲಿ 'ಯನಾಬೀಅ್' ಎಂಬ ಪದ ಪ್ರಯೋಗವಾಗಿದೆ. ಇದು ಮೂರು ವಿಷಯಗಳಿಗೂ ಅನ್ವಯವಾಗುತ್ತದೆ.

لَذِكْرٰى لِاُولِى الْاَلْبَابِ ﴿٢١﴾

ನೋಡುತ್ತೀರಿ. ಕೊನೆಗೆ ಅಲ್ಲಾಹನು ಅವುಗಳನ್ನು ಹೊಟ್ಟಾಗಿ ಮಾಡಿ ಬಿಡುತ್ತಾನೆ. ವಾಸ್ತವದಲ್ಲಿ ಇದರಲ್ಲಿ ಬುದ್ಧಿಜೀವಿಗಳಿಗೆ ಒಂದು ಪಾಠವಿದೆ.

اَفَمَنْ شَرَحَ اللّٰهُ صَدْرَهٗ لِلْاِسْلَامِ فَهُوَ عَلٰى نُوْرٍ مِّنْ رَّبِّهٖ ؕ فَوَيْلٌ لِّلْقٰسِيَةِ قُلُوْبُهُمْ مِّنْ ذِكْرِ اللّٰهِ ؕ اُولٰٓئِكَ فِىْ ضَلٰلٍ مُّبِيْنٍ ﴿٢٢﴾

22. ಅಲ್ಲಾಹನು ಯಾರ ಹೃದಯವನ್ನು ಇಸ್ಲಾಮಿಗಾಗಿ ತೆರೆದುಬಿಟ್ಟನೋ ಹಾಗೂ ಯಾರು ತನ್ನ ಪ್ರಭುವಿನ ಕಡೆಯಿಂದ ಒಂದು ಪ್ರಕಾಶದಲ್ಲಿ ನಡೆಯುತ್ತಿರುವನೋ ಅವನು (ಇವುಗಳಿಂದ ಯಾವ ಪಾಠವನ್ನೂ ಕಲಿಯದವನಂತೆ ಆಗಬಲ್ಲನೇ?) ಯಾರ ಹೃದಯಗಳು ಅಲ್ಲಾಹನ ಬೋಧನೆಯಿಂದ ಇನ್ನಷ್ಟು ಕಠಿಣವಾಗಿ ಹೋದುವೋ ಅವರಿಗಾಗಿ ವಿನಾಶವಿದೆ. ಅವರು ಸುವ್ಯಕ್ತ ಪಥಭ್ರಷ್ಟತೆಯಲ್ಲಿ ಬಿದ್ದಿರುತ್ತಾರೆ.

اَللّٰهُ نَزَّلَ اَحْسَنَ الْحَدِيْثِ كِتٰبًا مُّتَشَابِهًا مَّثَانِىَ ۖ تَقْشَعِرُّ مِنْهُ جُلُوْدُ الَّذِيْنَ يَخْشَوْنَ رَبَّهُمْ ۚ ثُمَّ تَلِيْنُ جُلُوْدُهُمْ وَقُلُوْبُهُمْ اِلٰى ذِكْرِ اللّٰهِ ؕ ذٰلِكَ هُدَى اللّٰهِ يَهْدِىْ بِهٖ مَنْ يَّشَآءُ ؕ وَمَنْ يُّضْلِلِ اللّٰهُ فَمَا لَهٗ مِنْ هَادٍ ﴿٢٣﴾

23. ಅಲ್ಲಾಹನು ಅತ್ಯುತ್ತಮ ವಾಣಿಯನ್ನು ಅವತರಿಸಿರುವನು. ಎಲ್ಲ ಭಾಗಗಳೂ ಸಮಾನ ಸ್ವರೂಪವಾಗಿರುವಂತಹ ಗ್ರಂಥವಿದು. ಇದರಲ್ಲಿ ವಿಷಯಗಳು ಪುನರಾವರ್ತಿಸಲ್ಪಟ್ಟಿವೆ. ಇದನ್ನು ಕೇಳಿದಾಗ, ತಮ್ಮ ಪ್ರಭುವನ್ನು ಭಯಪಡುವವರಿಗೆ ರೋಮಾಂಚನವಾಗುತ್ತದೆ ಮತ್ತು ಅವರ ಶರೀರ ಹಾಗೂ ಹೃದಯಗಳು ಮೃದುವಾಗಿ ಅಲ್ಲಾಹನ ಸ್ಮರಣೆಯ ಕಡೆಗೆ ವಾಲಿ ಬಿಡುತ್ತವೆ. ಇದು ಅಲ್ಲಾಹನ ಮಾರ್ಗದರ್ಶನ. ಇದರ ಮೂಲಕ ಅವನು ತಾನಿಚ್ಛಿಸಿದವರನ್ನು ಸನ್ಮಾರ್ಗಕ್ಕೆ ತರುತ್ತಾನೆ ಮತ್ತು ಅಲ್ಲಾಹನೇ ಸನ್ಮಾರ್ಗ ತೋರದಿದ್ದರೆ ಅಂತಹವನಿಗೆ ಬೇರಾವ ಮಾರ್ಗದರ್ಶಕನೂ ಇಲ್ಲ.

اَفَمَنْ يَّتَّقِىْ بِوَجْهِهٖ سُوْٓءَ الْعَذَابِ يَوْمَ الْقِيٰمَةِ ؕ وَقِيْلَ لِلظّٰلِمِيْنَ ذُوْقُوْا مَا كُنْتُمْ تَكْسِبُوْنَ ﴿٢٤﴾

24. ಪುನರುತ್ಥಾನದಿನ (ತನ್ನ ಮುಖದ ಮೇಲೆ) ಯಾತನೆಯ ಉಗ್ರ ಹೊಡೆತವನ್ನು ತಿನ್ನುವವನ ದುರವಸ್ಥೆಯನ್ನು ನೀವು ಊಹಿಸಬಲ್ಲಿರಾ? ಇಂತಹ ಅಕ್ರಮಿಗಳೊಡನೆ "ಈಗ ನೀವು ಮಾಡುತ್ತಿದ್ದಗಳಿಕೆಯ ರುಚಿಯನ್ನು ಸವಿಯಿರಿ" ಎಂದು ಹೇಳಲಾಗುವುದು.

كَذَّبَ الَّذِيْنَ مِنْ قَبْلِهِمْ فَاَتٰىهُمُ الْعَذَابُ مِنْ حَيْثُ لَا يَشْعُرُوْنَ ﴿٢٥﴾

25. ಇವರಿಗಿಂತ ಮುಂಚೆಯೂ ಅನೇಕರು ಇದೇ ರೀತಿ ಸುಳ್ಳಾಗಿಸಿದ್ದಾರೆ. ಕೊನೆಗೆ ಅವರ ಯೋಚನೆಗೂ ನಿಲುಕದ ಕಡೆಯಿಂದ ಅವರ ಮೇಲೆ ಯಾತನೆ ಬಂತು.

فَاَذَاقَهُمُ اللّٰهُ الْخِزْىَ فِى الْحَيٰوةِ الدُّنْيَا ۚ وَلَعَذَابُ الْاٰخِرَةِ اَكْبَرُ ۘ لَوْ كَانُوْا يَعْلَمُوْنَ ﴿٢٦﴾

26. ತರುವಾಯ ಅಲ್ಲಾಹನು ಅವರಿಗೆ ಲೌಕಿಕ ಜೀವನದಲ್ಲೇ ಅಪಮಾನದ ರುಚಿಯನ್ನು ಸವಿಸಿದನು ಮತ್ತು ಪರಲೋಕದ ಯಾತನೆಯಂತೂ ಇದಕ್ಕಿಂತಲೂ ಉಗ್ರವಾಗಿದೆ. ಇವರು ಅರಿಯುತ್ತಿದ್ದರೆ!

27. ಜನರು ಪ್ರಜ್ಞಾವಂತರಾಗಲೆಂದು ನಾವು ಈ ಕುರ್‍ಆನಿನಲ್ಲಿ ಅವರಿಗೆ ತರತರದ ಉದಾಹರಣೆಗಳನ್ನು ನೀಡಿದ್ದೇವೆ.

وَلَقَدْ ضَرَبْنَا لِلنَّاسِ فِي هَٰذَا الْقُرْآنِ مِن كُلِّ مَثَلٍ لَّعَلَّهُمْ يَتَذَكَّرُونَ ٢٧

28. ಅರಬೀ ಭಾಷೆಯಲ್ಲಿರುವ ಕುರ್‍ಆನ್ ಇದರಲ್ಲಿ ಯಾವ ವಕ್ರತೆಯೂ ಇಲ್ಲ. (ಇದು) ಇವರು ರಕ್ಷಣೆ ಹೊಂದಲಿಕ್ಕಾಗಿದೆ.

قُرْآنًا عَرَبِيًّا غَيْرَ ذِي عِوَجٍ لَّعَلَّهُمْ يَتَّقُونَ ٢٨

29. ಅಲ್ಲಾಹನು ಒಂದು ಉದಾಹರಣೆ ಕೊಡುತ್ತಾನೆ. ಒಬ್ಬನಿಗೆ ದುಷ್ಟ ಸ್ವಭಾವದ ಅನೇಕ ಯಜಮಾನರಿದ್ದು ಅವರೆಲ್ಲಾ ಆತನನ್ನು ತಮ್ಮ ತಮ್ಮೆಡೆಗೆ ಎಳೆಯುತ್ತಿದ್ದಾರೆ. ಇನ್ನೊಬ್ಬನು ಸಂಪೂರ್ಣ ವಾಗಿ ಕೇವಲ ಒಬ್ಬ ಯಜಮಾನನ ದಾಸನು. ಇವರಿಬ್ಬರ ಸ್ಥಿತಿ ಏಕರೂಪವಾಗಿರಲು ಸಾಧ್ಯವೇ?- 'ಸರ್ವಸ್ತುತಿಗಳೂ ಅಲ್ಲಾಹನಿಗೆ ಮೀಸಲು.' ಆದರೆ ಹೆಚ್ಚಿನವರು ಅಜ್ಞಾನದಲ್ಲಿ ಬಿದ್ದಿದ್ದಾರೆ.[5]

ضَرَبَ اللَّهُ مَثَلًا رَّجُلًا فِيهِ شُرَكَاءُ مُتَشَاكِسُونَ وَرَجُلًا سَلَمًا لِّرَجُلٍ هَلْ يَسْتَوِيَانِ مَثَلًا ۚ الْحَمْدُ لِلَّهِ ۚ بَلْ أَكْثَرُهُمْ لَا يَعْلَمُونَ ٢٩

30. (ಸಂದೇಶವಾಹಕರೇ) ನಿಮಗೂ ಮರಣ ಹೊಂದಲಿಕ್ಕಿದೆ ಮತ್ತು ಇವರಿಗೂ ಮರಣ ಹೊಂದಲಿಕ್ಕಿದೆ-

إِنَّكَ مَيِّتٌ وَإِنَّهُم مَّيِّتُونَ ٣٠

31. ಕೊನೆಗೆ ಪುನರುತ್ಥಾನ ದಿನ ನೀವೆಲ್ಲರೂ ನಿಮ್ಮ ಪ್ರಭುವಿನ ಸನ್ನಿಧಿಯಲ್ಲಿ ನಿಮ್ಮ ನಿಮ್ಮ ದಾವೆಗಳನ್ನು ಹೂಡಲಿರುವಿರಿ.

ثُمَّ إِنَّكُمْ يَوْمَ الْقِيَامَةِ عِندَ رَبِّكُمْ تَخْتَصِمُونَ ٣١

الجزء ٢٤

32. *ಅಲ್ಲಾಹನ ಮೇಲೆ ಸುಳ್ಳಾರೋಪ ಹೊರಿಸಿದ ಮತ್ತು ಸತ್ಯವು ತನ್ನ ಮುಂದೆ ಬಂದಾಗ ಅದನ್ನು ಸುಳ್ಳಾಗಿಸಿ ಬಿಟ್ಟವನಿಗಿಂತ ದೊಡ್ಡ ಅಕ್ರಮಿ ಇನ್ನಾರಿರಬಹುದು? ಇಂತಹ ಸತ್ಯನಿಷೇಧಿಗಳಿಗೆ ನರಕದಲ್ಲಿ ನೆಲೆಯಿಲ್ಲವೇ?

فَمَنْ أَظْلَمُ مِمَّن كَذَبَ عَلَى اللَّهِ وَكَذَّبَ بِالصِّدْقِ إِذْ جَاءَهُ ۚ أَلَيْسَ فِي جَهَنَّمَ مَثْوًى لِّلْكَافِرِينَ ٣٢

33. ಸತ್ಯವನ್ನು ತಂದವನು ಮತ್ತು ಅದನ್ನು ಸತ್ಯವೆಂದು ನಂಬಿದವರು ಮಾತ್ರ ಯಾತನೆಯಿಂದ ರಕ್ಷಣೆ ಪಡೆಯುವರು.

وَالَّذِي جَاءَ بِالصِّدْقِ وَصَدَّقَ بِهِ أُولَٰئِكَ هُمُ الْمُتَّقُونَ ٣٣

34. ಅವರು ಬಯಸಿದ್ದೆಲ್ಲವೂ ಅವರ ಪ್ರಭುವಿನ ಬಳಿ ಅವರಿಗೆ ಸಿಗುವುದು. ಇದು ಪುಣ್ಯ ಮಾಡಿದವರಿಗೆ ಇರುವ ಸತ್ಫಲ.

لَهُم مَّا يَشَاءُونَ عِندَ رَبِّهِمْ ۚ ذَٰلِكَ جَزَاءُ الْمُحْسِنِينَ ٣٤

35. (ಇದು) ಅವರು ಮಾಡಿದ್ದ ಅತ್ಯಂತ ನಿಕೃಷ್ಟ ಕರ್ಮಗಳನ್ನು ಅಲ್ಲಾಹನು ಅವರ ಲೆಕ್ಕದಿಂದ ಅಳಿಸಿ ಹಾಕಲು ಮತ್ತು ಅವರಿಗೆ,

لِيُكَفِّرَ اللَّهُ عَنْهُمْ أَسْوَأَ الَّذِي عَمِلُوا وَيَجْزِيَهُمْ أَجْرَهُم بِأَحْسَنِ الَّذِي

5. ಅರ್ಥಾತ್- ಓರ್ವ ಪ್ರಭುವಿನ ದಾಸ್ಯ ಮತ್ತು ಅನೇಕ ಪ್ರಭುಗಳ ದಾಸ್ಯದ ನಡುವಿನ ವ್ಯತ್ಯಾಸವನ್ನು ಅವರು ಚೆನ್ನಾಗಿ ಮನಗಾಣುತ್ತಾರೆ. ಆದರೆ ಏಕದೇವನ ದಾಸ್ಯ ಮತ್ತು ಅನೇಕ ದೇವರುಗಳ ದಾಸ್ಯದ ನಡುವಿನ ವ್ಯತ್ಯಾಸವನ್ನು ತಿಳಿಸಲು ಪ್ರಯತ್ನಿಸಿದರೆ ಅವರು ತಿಳಿಗೇಡಿಗಳಾಗಿ ಬಿಡುತ್ತಾರೆ.

***ಇಲ್ಲಿಂದ 24ನೆಯ ಕಾಂಡ ಆರಂಭ.**

ಅವರು ಮಾಡುತ್ತಿದ್ದ ಅತ್ಯುತ್ಕೃಷ್ಟ ಕರ್ಮಗಳಿಗನುಸಾರ ಪ್ರತಿಫಲ ನೀಡಲು(ಆಗಿರುತ್ತದೆ).

كَانُوْا يَعْمَلُوْنَ ۝٣٥

36. (ಸಂದೇಶವಾಹಕರೇ) ಅಲ್ಲಾಹನು ತನ್ನ ದಾಸನಿಗೆ ಸಾಕಾಗಲಾರನೇ? ಇವರು ಅವನ ಹೊರತಾಗಿರುವ ಇತರರ ಬಗ್ಗೆ ನಿಮ್ಮನ್ನು ಹೆದರಿಸುತ್ತಾರೆ. ವಸ್ತುತಃ ಯಾರನ್ನು ಅಲ್ಲಾಹನೇ ಪಥಭ್ರಷ್ಟಗೊಳಿಸಿಬಿಟ್ಟನೋ ಅವನಿಗೆ ದಾರಿ ತೋರಿಸುವವನಾರೂ ಇಲ್ಲ-

اَلَيْسَ اللّٰهُ بِكَافٍ عَبْدَهٗ ؕ وَيُخَوِّفُوْنَكَ
بِالَّذِيْنَ مِنْ دُوْنِهٖ ؕ وَمَنْ يُّضْلِلِ
اللّٰهُ فَمَا لَهٗ مِنْ هَادٍ ۝٣٦

37. ಮತ್ತು ಯಾರಿಗೆ ಅಲ್ಲಾಹನೇ ಮಾರ್ಗದರ್ಶನ ಮಾಡಿದನೋ ಅವನನ್ನು ದಾರಿಗೆಡಿಸುವವನೂ ಯಾರೂ ಇಲ್ಲ. ಅಲ್ಲಾಹನು ಮಹಾಪ್ರಬಲನೂ ಪ್ರತೀಕಾರ ಪಡೆಯುವವನೂ ಅಲ್ಲವೇ?

وَمَنْ يَّهْدِ اللّٰهُ فَمَا لَهٗ مِنْ مُّضِلٍّ ؕ
اَلَيْسَ اللّٰهُ بِعَزِيْزٍ ذِى انْتِقَامٍ ۝٣٧

38. ಭೂಮಿ-ಆಕಾಶಗಳನ್ನು ಸೃಷ್ಟಿಸಿದವನಾರೆಂದು ನೀವು ಇವರೊಡನೆ ಕೇಳಿದರೆ, ಅಲ್ಲಾಹನೆಂದು ಇವರೇ ಸ್ವತಃ ಹೇಳುವರು. ವಸ್ತುಸ್ಥಿತಿ ಹೀಗಿರುವಾಗ ಅಲ್ಲಾಹನು ನನಗೇನಾದರೂ ಹಾನಿಯನ್ನುಂಟು ಮಾಡಲಿಚ್ಛಿಸಿದರೆ ನೀವು ಅಲ್ಲಾಹನನ್ನು ಬಿಟ್ಟು ಪ್ರಾರ್ಥಿಸುತ್ತಿರುವ ನಿಮ್ಮ ಈ ದೇವತೆಗಳು, ಆತನು ಮಾಡುವ ಹಾನಿಯಿಂದ ನನ್ನನ್ನು ರಕ್ಷಿಸಬಲ್ಲರೇ ಅಥವಾ ಅಲ್ಲಾಹನು ನನ್ನ ಮೇಲೆ ಕೃಪೆ ತೋರಲಿಚ್ಛಿಸಿದರೆ ಇವರು ಅವನ ಕೃಪೆಯನ್ನು ತಡೆಯಬಲ್ಲರೇ? ಎಂದು ಅವರೊಡನೆ ಕೇಳಿರಿ. ನನಗೆ ಅಲ್ಲಾಹನೇ ಸಾಕು. ಭರವಸೆ ಇಡುವವರು ಅವನ ಮೇಲೆಯೇ ಭರವಸೆಯನ್ನಿಡುತ್ತಾರೆ ಎಂದು ಅವರೊಡನೆ ಹೇಳಿ ಬಿಡಿರಿ.

وَلَئِنْ سَاَلْتَهُمْ مَّنْ خَلَقَ السَّمٰوٰتِ
وَالْاَرْضَ لَيَقُوْلُنَّ اللّٰهُ ؕ قُلْ اَفَرَءَيْتُمْ
مَّا تَدْعُوْنَ مِنْ دُوْنِ اللّٰهِ اِنْ اَرَادَنِىَ
اللّٰهُ بِضُرٍّ هَلْ هُنَّ كٰشِفٰتُ ضُرِّهٖۤ اَوْ
اَرَادَنِىْ بِرَحْمَةٍ هَلْ هُنَّ مُمْسِكٰتُ
رَحْمَتِهٖ ؕ قُلْ حَسْبِىَ اللّٰهُ ؕ عَلَيْهِ
يَتَوَكَّلُ الْمُتَوَكِّلُوْنَ ۝٣٨

39. ಇವರೊಡನೆ ಸ್ಪಷ್ಟವಾಗಿ ಹೇಳಿ ಬಿಡಿರಿ- "ನನ್ನ ಜನಾಂಗದವರೇ, ನೀವು ನಿಮ್ಮಿಷ್ಟಕ್ಕೆ ನಿಮ್ಮ ಕೆಲಸ ಮಾಡುತ್ತಲಿರಿ. ನಾನು ನನ್ನ ಕೆಲಸವನ್ನು ಮಾಡುತ್ತಲಿರುವೆನು-

قُلْ يٰقَوْمِ اعْمَلُوْا عَلٰى مَكَانَتِكُمْ اِنِّىْ
عَامِلٌ ۚ فَسَوْفَ تَعْلَمُوْنَ ۝٣٩

40. ಯಾರ ಮೇಲೆ ಅಪಮಾನಕರ ಯಾತನೆ ಬರುತ್ತದೆ ಮತ್ತು ಎಂದೆಂದೂ ಸಿಗದಂತಹ ಶಿಕ್ಷೆ ಯಾರಿಗೆ ಸಿಗುತ್ತದೆಂದು ಸದ್ಯದಲ್ಲೇ ನಿಮಗೆ ತಿಳಿದು ಬರುವುದು."

مَنْ يَّاْتِيْهِ عَذَابٌ يُّخْزِيْهِ وَيَحِلُّ
عَلَيْهِ عَذَابٌ مُّقِيْمٌ ۝٤٠

41. (ಸಂದೇಶವಾಹಕರೇ) ನಾವು ಸಕಲ ಮಾನವರಿಗಾಗಿ ಈ ಪರಮ ಸತ್ಯಗ್ರಂಥವನ್ನು ನಿಮಗೆ ಅವತೀರ್ಣಗೊಳಿಸಿದ್ದೇವೆ. ಇನ್ನು ನೇರ ಮಾರ್ಗವನ್ನನುಸರಿಸುವವನು ತನಗಾಗಿಯೇ ಅನುಸರಿಸುವನು

اِنَّاۤ اَنْزَلْنَا عَلَيْكَ الْكِتٰبَ لِلنَّاسِ
بِالْحَقِّ ۚ فَمَنِ اهْتَدٰى فَلِنَفْسِهٖ ۚ وَ
مَنْ ضَلَّ فَاِنَّمَا يَضِلُّ عَلَيْهَا ۚ وَمَاۤ

أَنتَ عَلَيْهِم بِوَكِيلٍ ﴿٤١﴾

ಮತ್ತು ಪಥಭ್ರಷ್ಟನಾಗುವವನ ಪಥಭ್ರಷ್ಟತೆಯ ದೋಷವು ಅವನ ಮೇಲೆಯೇ ಇರುವುದು. ನೀವು ಅವರ ಹೊಣೆಗಾರರಲ್ಲ.

ٱللَّهُ يَتَوَفَّى ٱلْأَنفُسَ حِينَ مَوْتِهَا
وَٱلَّتِى لَمْ تَمُتْ فِى مَنَامِهَا ۖ فَيُمْسِكُ
ٱلَّتِى قَضَىٰ عَلَيْهَا ٱلْمَوْتَ وَيُرْسِلُ
ٱلْأُخْرَىٰٓ إِلَىٰٓ أَجَلٍ مُّسَمًّى ۚ إِنَّ فِى
ذَٰلِكَ لَءَايَٰتٍ لِّقَوْمٍ يَتَفَكَّرُونَ ﴿٤٢﴾

42. ಮರಣದ ವೇಳೆ ಆತ್ಮಗಳನ್ನು ವಶಪಡಿಸಿಕೊಳ್ಳುವವನು ಅಲ್ಲಾಹನೇ ಮತ್ತು ಇನ್ನೂ ಸಾಯದಿದ್ದವನ ಆತ್ಮವನ್ನು ನಿದ್ರಾವಸ್ಥೆಯಲ್ಲಿ ವಶಪಡಿಸಿಕೊಳ್ಳುವವನೂ ಅವನೇ. ಅವನು ಯಾವುದರ ಮೇಲೆ ಮರಣದ ತೀರ್ಮಾನವನ್ನು ಜಾರಿಗೊಳಿಸುತ್ತಾನೋ ಅದನ್ನು ತಡೆ ಹಿಡಿಯುತ್ತಾನೆ ಮತ್ತು ಇತರ ಆತ್ಮಗಳನ್ನು ಒಂದು ನಿರ್ದಿಷ್ಟ ಕಾಲದವರೆಗಾಗಿ ಹಿಂದಕ್ಕೆ ಕಳುಹಿಸುತ್ತಾನೆ. ನಿಶ್ಚಯವಾಗಿಯೂ ವಿಚಾರಶೀಲರಿಗೆ ಇದರಲ್ಲಿ ದೊಡ್ಡ ನಿದರ್ಶನಗಳಿವೆ.

أَمِ ٱتَّخَذُوا۟ مِن دُونِ ٱللَّهِ شُفَعَآءَ ۚ
قُلْ أَوَلَوْ كَانُوا۟ لَا يَمْلِكُونَ
شَيْـًٔا وَلَا يَعْقِلُونَ ﴿٤٣﴾

43. ಇವರು ಆ ಅಲ್ಲಾಹನನ್ನು ಬಿಟ್ಟು ಇತರರನ್ನು ಶಿಫಾರಸುದಾರರಾಗಿ ಮಾಡಿಬಿಟ್ಟಿರುವರೇ?[6] ಅವರ ಅಧಿಕಾರದಲ್ಲಿ ಏನೂ ಇಲ್ಲದಿದ್ದರೂ ಅವರು ಅವಿವೇಕಿಗಳಾಗಿದ್ದರೂ ಶಿಫಾರಸು ಮಾಡುವರೇ? ಎಂದು ಕೇಳಿರಿ.

قُل لِّلَّهِ ٱلشَّفَٰعَةُ جَمِيعًا ۖ لَّهُۥ مُلْكُ
ٱلسَّمَٰوَٰتِ وَٱلْأَرْضِ ۖ ثُمَّ إِلَيْهِ تُرْجَعُونَ ﴿٤٤﴾

44. ಶಿಫಾರಸ್ಸು ಸಂಪೂರ್ಣವಾಗಿ ಅಲ್ಲಾಹನ ಅಧಿಕಾರದಲ್ಲಿದೆ.[7] ಭೂಮಿ-ಆಕಾಶಗಳ ಪ್ರಭುತ್ವಕ್ಕೆ ಅವನೇ ಒಡೆಯನಾಗಿರುತ್ತಾನೆ. ಅನಂತರ ನೀವು ಅವನ ಕಡೆಗೇ ಮರಳಿಸಲ್ಪಡಲಿರುವಿರಿ ಎಂದು ಹೇಳಿರಿ.

وَإِذَا ذُكِرَ ٱللَّهُ وَحْدَهُ ٱشْمَأَزَّتْ
قُلُوبُ ٱلَّذِينَ لَا يُؤْمِنُونَ بِٱلْءَاخِرَةِ ۖ
وَإِذَا ذُكِرَ ٱلَّذِينَ مِن دُونِهِۦٓ
إِذَا هُمْ يَسْتَبْشِرُونَ ﴿٤٥﴾

45. ಏಕಮಾತ್ರ ಅಲ್ಲಾಹನ ಪ್ರಸ್ತಾಪವೆತ್ತಲಾದಾಗ ಪರಲೋಕದ ಮೇಲೆ ವಿಶ್ವಾಸವಿಲ್ಲದವರ ಹೃದಯಗಳು ಮರುಗಲಾರಂಭಿಸುತ್ತವೆ ಮತ್ತು ಅವನ ಹೊರತು ಇತರರ ಪ್ರಸ್ತಾಪ ಬರುವಾಗ ಅವರು ಒಮ್ಮೆಲೇ ಆನಂದ ತುಂದಿಲರಾಗುತ್ತಾರೆ.[8]

6. ಅರ್ಥಾತ್- ಅಲ್ಲಾಹನ ಬಳಿ ಕೆಲವು ವ್ಯಕ್ತಿಗಳು ಬಹಳ ಪ್ರಭಾವಶಾಲಿಗಳಾಗಿದ್ದಾರೆ, ಅವರ ಶಿಫಾರಸನ್ನು ಯಾವ ರೀತಿಯಲ್ಲೂ ತಳ್ಳಿಹಾಕಲು ಸಾಧ್ಯವಿಲ್ಲವೆಂದು ಅವರು ಸ್ವತಃ ಲೆಕ್ಕಹಾಕಿಕೊಂಡಿದ್ದಾರೆ. ಆದರೆ ಅವರು ಶಿಪಾರಸುದಾರರಾಗಿದ್ದಾರೆಂಬುದಕ್ಕೆ ಯಾವುದೇ ಆಧಾರವಿಲ್ಲ. ಅಲ್ಲಾಹನೂ ತನ್ನ ಬಳಿ ಅವರಿಗೆ ಉನ್ನತ ಪದವಿ ಪ್ರಾಪ್ತವಿದೆಯೆಂದು ಹೇಳಿಲ್ಲ. ಹಾಗೆಯೇ ಆ ವ್ಯಕ್ತಿಗಳು ಸ್ವತಃ ನಾವು ನಮ್ಮ ಪ್ರಾಬಲ್ಯದಿಂದ ನಿಮ್ಮ ಕೆಲಸ ಮಾಡಿಸಿಯೇ ಬಿಡುತ್ತೇವೆ ಎಂದು ವಾದಿಸಿಲ್ಲ. ಮಾತ್ರವಲ್ಲ ಈ ಕಪೋಲಕಲ್ಪಿತ ಶಿಪಾರಸುದಾರರನ್ನೇ ಸರ್ವಸ್ವ ಎಂದು ಭಾವಿಸಿ ತಮ್ಮೆಲ್ಲಾ ಹರಕೆಗಳನ್ನು ಅವರಿಗೇ ಒಪ್ಪಿಸುತ್ತಿರುವುದು ಅವರ ಮೂರ್ಖತನದ ಪರಮಾವಧಿಯಾಗಿದೆ.

7. ಅರ್ಥಾತ್- ಅಲ್ಲಾಹನ ಆಸ್ಥಾನದಲ್ಲಿ ಶಿಫಾರಸುದಾರರಾಗಿ ಎದ್ದುನಿಲ್ಲುವಷ್ಟು ಧೈರ್ಯವನ್ನು ಯಾರೂ ಹೊಂದಿಲ್ಲ. ಇನ್ನು ಶಿಫಾರಸನ್ನು ಈಡೇರಿಸಿಯೇ ತೀರುವ ಮಾತು ದೂರವೇ ಉಳಿಯಿತು. ಶಿಫಾರಸಿನ ಅನುಮತಿಯನ್ನು ಯಾರಿಗೆ ಬೇಕಾದರೂ ನೀಡುವ ಮತ್ತು ಯಾರಿಗೆ ಬೇಕಾದರೂ ನಿರಾಕರಿಸುವ ಅಧಿಕಾರ ಅಲ್ಲಾಹನಿಗೆ ಮಾತ್ರವಿದೆ. ಹಾಗೆಯೇ ಯಾರ ಪರವಾಗಿ ಬೇಕಾದರೂ ಶಿಫಾರಸು ಅನುಮತಿಸುವ ಮತ್ತು ಯಾರ ಬಗ್ಗೆ ಬೇಕಾದರೂ ನಿರಾಕರಿಸುವ ಅಧಿಕಾರವೂ ಅವನಿಗೇ ಇದೆ.

8. ಇದು ಬಹುದೇವಾರಾಧನೆಯ ಆಸಕ್ತಿ ಹೊಂದಿರುವ ಜಗತ್ತಿನ ಎಲ್ಲಾ ಜನಾಂಗಗಳಲ್ಲಿ ಕಂಡು ಬರುವ ಸಮಾನ ಅಂಶವಾಗಿದೆ. ಮುಸ್ಲಿಮರ ಪೈಕಿಯೂ ಬಹುದೇವಾರಾಧನೆಯ ಸೋಂಕು ತಗಲಿರುವ ದುರ್ದೈವಿಗಳಲ್ಲಿ ಈ ದೋಷ ಕಂಡುಬರುತ್ತದೆ. ನಾಲಗೆಯಿಂದ ನಾವು

46. ಹೇಳಿರಿ- "ಅಲ್ಲಾಹ್! ಭೂಮಿ-ಆಕಾಶಗಳ ಸೃಷ್ಟಿಕರ್ತನೇ! ಪ್ರತ್ಯಕ್ಷ-ಪರೋಕ್ಷಗಳ ಜ್ಞಾನಿಯೇ, ನಿನ್ನ ದಾಸರು ಭಿನ್ನಾಭಿಪ್ರಾಯ ತಾಳುತ್ತಾ ಬಂದಿರುವ ವಿಷಯದಲ್ಲಿ ಅವರ ನಡುವೆ ನೀನೇ ತೀರ್ಮಾನ ಮಾಡಲಿರುವೆ.

قُلِ اللّٰهُمَّ فَاطِرَ السَّمٰوٰتِ وَالْاَرْضِ
عٰلِمَ الْغَيْبِ وَالشَّهَادَةِ اَنْتَ تَحْكُمُ
بَيْنَ عِبَادِكَ فِيْ مَا كَانُوْا فِيْهِ يَخْتَلِفُوْنَ ﴿٤٦﴾

47. ಈ ಅಕ್ರಮಿಗಳ ವಶದಲ್ಲಿ ಭೂಮಿಯ ಸಕಲ ಸಂಪತ್ತು ಇದ್ದರೂ ಮತ್ತು ಅಷ್ಟೇ ಇನ್ನೂ ಇದ್ದರೂ ಅವರು ಇದೆಲ್ಲವನ್ನೂ ಪುನರುತ್ಥಾನ ದಿನದ ಕೆಟ್ಟ ಯಾತನೆಯಿಂದ ಪಾರಾಗಲಿಕ್ಕಾಗಿ ಪರಿಹಾರವಾಗಿ ಕೊಡಲು ಸಿದ್ಧರಾಗುವರು. ಅಲ್ಲಿ ಅಲ್ಲಾಹನ ಕಡೆಯಿಂದ ಇವರು ನಿರೀಕ್ಷಿಸದೆ ಇದ್ದುದೆಲ್ಲವೂ ಇವರ ಮುಂದೆ ಬರುವುದು.

وَلَوْ اَنَّ لِلَّذِيْنَ ظَلَمُوْا مَا فِي الْاَرْضِ
جَمِيْعًا وَّمِثْلَهٗ مَعَهٗ لَافْتَدَوْا بِهٖ
مِنْ سُوْٓءِ الْعَذَابِ يَوْمَ الْقِيٰمَةِ ۭ
وَبَدَا لَهُمْ مِّنَ اللّٰهِ مَا لَمْ يَكُوْنُوْا
يَحْتَسِبُوْنَ ﴿٤٧﴾

48. ಅಲ್ಲಿ ಇವರಿಗೆ, ಇವರ ಗಳಿಕೆಯ ದುಷ್ಪರಿಣಾಮಗಳೆಲ್ಲವೂ ಬಯಲಾಗಿ ಬಿಡುವುವು. ಯಾವುದನ್ನು ಇವರು ಅಪಹಾಸ್ಯ ಮಾಡುತ್ತಿದ್ದರೋ ಅದುವೇ ಇವರ ಮೇಲೆ ಎರಗುವುದು.

وَبَدَا لَهُمْ سَيِّاٰتُ مَا كَسَبُوْا وَحَاقَ
بِهِمْ مَّا كَانُوْا بِهٖ يَسْتَهْزِءُوْنَ ﴿٤٨﴾

49. ಇದೇ ಮಾನವನಿಗೆ ಒಂದಿಷ್ಟು ಸಂಕಷ್ಟವು ಬಂದಾಗ ಅವನು ನಮ್ಮನ್ನು ಪ್ರಾರ್ಥಿಸುತ್ತಾನೆ ಮತ್ತು ನಾವು ಅವನಿಗೆ ನಮ್ಮ ಕಡೆಯಿಂದ ಕೊಡುಗೆಗಳನ್ನು ಕೊಟ್ಟು ಉಬ್ಬಿಸಿದಾಗ, "ಇದನ್ನು ನನಗೆ ಜ್ಞಾನದ ಆಧಾರದಲ್ಲಿ ಕೊಡಲಾಗಿದೆ" ಎನ್ನುತ್ತಾನೆ. ಅಲ್ಲ, ವಾಸ್ತವದಲ್ಲಿ ಇದು ಪರೀಕ್ಷೆಯಾಗಿದೆ. ಆದರೆ ಇವರಲ್ಲಿ ಹೆಚ್ಚಿನವರು ಅರಿಯುವುದಿಲ್ಲ.

فَاِذَا مَسَّ الْاِنْسَانَ ضُرٌّ دَعَانَا ۡ
ثُمَّ اِذَا خَوَّلْنٰهُ نِعْمَةً مِّنَّا ۙ قَالَ
اِنَّمَآ اُوْتِيْتُهٗ عَلٰى عِلْمٍ ۭ بَلْ هِيَ فِتْنَةٌ
وَّلٰكِنَّ اَكْثَرَهُمْ لَا يَعْلَمُوْنَ ﴿٤٩﴾

50. ಈ ಮಾತನ್ನೇ ಇವರಿಗಿಂತ ಮುಂಚೆ ಗತಿಸಿದವರೂ ಹೇಳಿದ್ದಾರೆ. ಆದರೆ ಅವರು ಗಳಿಸುತ್ತಿದ್ದುದು ಅವರಿಗೇನೂ ಫಲಕಾರಿ ಯಾಗಲಿಲ್ಲ.

قَدْ قَالَهَا الَّذِيْنَ مِنْ قَبْلِهِمْ فَمَآ
اَغْنٰى عَنْهُمْ مَّا كَانُوْا يَكْسِبُوْنَ ﴿٥٠﴾

51. ಅನಂತರ ಅವರು ತಮ್ಮ ಗಳಿಕೆಯ ಕೆಟ್ಟ ಫಲವನ್ನು ಅನುಭವಿಸಿದರು ಮತ್ತು ಇವರ ಪೈಕಿಯೂ ಅಕ್ರಮಿಯಾಗುವವರು ಸದ್ಯದಲ್ಲೇ ತಮ್ಮ ಗಳಿಕೆಯ ದುಷ್ಫಲವನ್ನು ಅನುಭವಿಸುವರು. ಇವರು ನಮ್ಮನ್ನು ಮಣಿಸಲಾರರು.

فَاَصَابَهُمْ سَيِّاٰتُ مَا كَسَبُوْا ۭ وَالَّذِيْنَ
ظَلَمُوْا مِنْ هٰٓؤُلَاۗءِ سَيُصِيْبُهُمْ سَيِّاٰتُ
مَا كَسَبُوْا ۙ وَمَا هُمْ بِمُعْجِزِيْنَ ﴿٥١﴾

ಅಲ್ಲಾಹನನ್ನು ನಂಬುತ್ತೇವೆ ಎಂದು ಅವರು ಹೇಳುತ್ತಾರೆ. ಆದರೆ ಏಕದೇವನ ಪ್ರಸ್ತಾಪ ಮಾಡಿದಾಗ ಅವರು ಮುಖ ಗಂಟಿಕ್ಕಿಕೊಳ್ಳುತ್ತಾರೆ. 'ಇವರು ಮಹಾಪುರುಷರನ್ನು ಮತ್ತು ಔಲಿಯಾಗಳನ್ನು ನಂಬುವುದಿಲ್ಲ. ಆದ್ದರಿಂದ ಅಲ್ಲಾಹನ ಬಗ್ಗೆ ಪ್ರಸ್ತಾಪಿಸುತ್ತಿದ್ದಾರೆ' ಎಂದು ಹೇಳುತ್ತಾರೆ. ಬೇರೆಯವರ ಬಗ್ಗೆ ಪ್ರಸ್ತಾಪಿಸಿದರೆ ಅವರ ಹೃದಯ ಕೇವಲ ಅರಳುತ್ತದೆ ಮತ್ತು ಮುಖ ಪ್ರಫುಲ್ಲಿತವಾಗುತ್ತದೆ.

52. ಅಲ್ಲಾಹನು ತಾನಿಚ್ಛಿಸಿದವರ ಜೀವನಾಧಾರವನ್ನು ವಿಸ್ತೃತಗೊಳಿಸಿ ಬಿಡುತ್ತಾನೆ ಮತ್ತು ತಾನಿಚ್ಛಿಸಿದವರಿಗೆ ಅದನ್ನು ಪರಿಮಿತಗೊಳಿಸುತ್ತಾನೆಂಬುದು ಇವರಿಗೆ ಗೊತ್ತಿಲ್ಲವೇ? ವಿಶ್ವಾಸವಿರಿಸುವವರಿಗೆ ಇದರಲ್ಲಿ ನಿದರ್ಶನಗಳಿವೆ.

أَوَلَمْ يَعْلَمُوٓا۟ أَنَّ ٱللَّهَ يَبْسُطُ ٱلرِّزْقَ لِمَن يَشَآءُ وَيَقْدِرُ ۚ إِنَّ فِى ذَٰلِكَ لَءَايَٰتٍ لِّقَوْمٍ يُؤْمِنُونَ ﴿٥٢﴾ ع

53. (ಸಂದೇಶವಾಹಕರೇ, ನನ್ನ ಪರವಾಗಿ) ಹೇಳಿರಿ; ತಮ್ಮ ಮೇಲೆಯೇ ಅತಿರೇಕವೆಸಗಿಕೊಂಡಿರುವ ನನ್ನ ದಾಸರೇ![9] ಅಲ್ಲಾಹನ ಕರುಣೆಯ ಬಗ್ಗೆ ನಿರಾಶರಾಗಬೇಡಿರಿ. ನಿಶ್ಚಯವಾಗಿಯೂ ಅಲ್ಲಾಹನ ಸಕಲ ಪಾಪಗಳನ್ನು ಕ್ಷಮಿಸಿ ಬಿಡುತ್ತಾನೆ. ಅವನಂತು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

قُلْ يَٰعِبَادِىَ ٱلَّذِينَ أَسْرَفُوا۟ عَلَىٰٓ أَنفُسِهِمْ لَا تَقْنَطُوا۟ مِن رَّحْمَةِ ٱللَّهِ ۚ إِنَّ ٱللَّهَ يَغْفِرُ ٱلذُّنُوبَ جَمِيعًا ۚ إِنَّهُۥ هُوَ ٱلْغَفُورُ ٱلرَّحِيمُ ﴿٥٣﴾

54. ನಿಮ್ಮ ಪ್ರಭುವಿನೆಡೆಗೆ ಮರಳಿ ಬನ್ನಿರಿ ಮತ್ತು ಅವನ ಶರಣಾಗತ ದಾಸರಾಗಿ ಬಿಡಿರಿ - ನಿಮ್ಮ ಮೇಲೆ ಯಾತನೆ ಎರಗಿ ಬಿಡುವ ಹಾಗೂ ಮತ್ತೆಲ್ಲಿಂದಲೂ ನಿಮಗೆ ಸಹಾಯ ಸಿಗಲಾರದ ಸ್ಥಿತಿ ಬರುವುದಕ್ಕೆ ಮುಂಚೆ.

وَأَنِيبُوٓا۟ إِلَىٰ رَبِّكُمْ وَأَسْلِمُوا۟ لَهُۥ مِن قَبْلِ أَن يَأْتِيَكُمُ ٱلْعَذَابُ ثُمَّ لَا تُنصَرُونَ ﴿٥٤﴾

55. ಮತ್ತು ನಿಮ್ಮ ಕಡೆಗೆ ನಿಮ್ಮ ಪ್ರಭುವಿನ ಕಡೆಯಿಂದ ಕಳುಹಿಸಲಾಗಿರುವ ಗ್ರಂಥದ ಅತ್ಯುತ್ತಮ ತಾತ್ಪರ್ಯವನ್ನು ಅನುಸರಿಸಿರಿ-[10] ನಿಮಗೆ ಅರಿವೇ ಇಲ್ಲದಂತೆ ನಿಮ್ಮ ಮೇಲೆ ಹಠಾತ್ತನೆ ಯಾತನೆಯು ಬಂದೆರಗುವುದಕ್ಕೆ ಮುಂಚೆ-

وَٱتَّبِعُوٓا۟ أَحْسَنَ مَآ أُنزِلَ إِلَيْكُم مِّن رَّبِّكُم مِّن قَبْلِ أَن يَأْتِيَكُمُ ٱلْعَذَابُ بَغْتَةً وَأَنتُمْ لَا تَشْعُرُونَ ﴿٥٥﴾

56. ಅನಂತರ ಯಾರಾದರೂ "ನಾನು ಅಲ್ಲಾಹನ ಮುಂದೆ ಮಾಡುತ್ತಲಿದ್ದ ಅಪರಾಧವು ಖೇದನೀಯ, ನಾನಂತು ಅಪಹಾಸ್ಯ ಮಾಡುವವರ ಸಾಲಿಗೆ ಸೇರಿದ್ದೆನು" ಎಂದು ಹೇಳುವಂತಾಗದಿರಲಿ-

أَن تَقُولَ نَفْسٌ يَٰحَسْرَتَىٰ عَلَىٰ مَا فَرَّطتُ فِى جَنۢبِ ٱللَّهِ وَإِن كُنتُ لَمِنَ ٱلسَّٰخِرِينَ ﴿٥٦﴾

9. ಕೆಲವರು ಈ ಪದವನ್ನು ವಿಚಿತ್ರ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಅಲ್ಲಾಹನು ಪ್ರವಾದಿವರ್ಯರಿಗೆ(ಸ) ಸ್ವತಃ, "ಓ ನನ್ನ ದಾಸರೇ!" ಎಂದು ಜನರನ್ನು ಕರೆಯಲು ಆದೇಶಿಸಿದ್ದಾನೆ. ಆದ್ದರಿಂದ ಮಾನವರೆಲ್ಲರೂ ಪ್ರವಾದಿವರ್ಯರ(ಸ) ದಾಸರಾಗಿದ್ದಾರೆ ಎನ್ನುತ್ತಾರೆ. ಇದು ವಾಸ್ತವದಲ್ಲಿ ವ್ಯಾಖ್ಯಾನವಲ್ಲ- ದುರ್ವ್ಯಾಖ್ಯಾನವಾಗಿದೆ. ಇದನ್ನು ಪವಿತ್ರ ಕುರ್‌ಆನಿನ ಅತ್ಯಂತ ಹೇಯವಾದ ಅರ್ಥವಿಕೃತಿಯೆಂದೂ ಅಲ್ಲಾಹನ ವಾಣಿಯೊಂದಿಗೆ ಆಡುವ ಆಟವೆಂದೂ ಹೇಳಲಾಗಿದೆ. ಈ ವ್ಯಾಖ್ಯಾನ ಸರಿಯೆಂದಾದರೆ ಅನಂತರ ಪವಿತ್ರ ಕುರ್‌ಆನ್ ಸಾದ್ಯಂತ ತಪ್ಪೆನ್ನಬೇಕಾಗುತ್ತದೆ. ಏಕೆಂದರೆ ಪವಿತ್ರ ಕುರ್‌ಆನ್ ಸಾದ್ಯಂತ ಮಾನವ, ಅಲ್ಲಾಹನ ದಾಸರು ಮಾತ್ರ ಆಗಿದ್ದಾರೆಂದು ಸಾರುತ್ತದೆ. ನೀವು ಓರ್ವ ಅಲ್ಲಾಹನನ್ನಲ್ಲದೆ ಯಾರ ದಾಸ್ಯವನ್ನೂ ಕೈಗೊಳ್ಳಬಾರದೆಂದು ಅದು ಕರೆ ನೀಡುತ್ತದೆ.

10. ಅಲ್ಲಾಹನ ಗ್ರಂಥದ ಅತ್ಯುತ್ತಮ ತಾತ್ಪರ್ಯವನ್ನು ಅನುಸರಿಸುವುದೆಂದರೆ ಅಲ್ಲಾಹನು ಯಾವ ಕೆಲಸವನ್ನು ಮಾಡುವ ಆದೇಶ ಕೊಟ್ಟಿದ್ದಾನೋ ಅದನ್ನು ಅನುಸರಿಸುವುದು, ಯಾವ ಕಾರ್ಯಗಳಿಂದ ತಡೆದಿದ್ದಾನೋ ಅದರಿಂದ ದೂರ ನಿಲ್ಲುವುದು, ಉದಾಹರಣೆ ಮತ್ತು ಘಟನೆಯ ರೂಪದಲ್ಲಿ ಅವನು ಯಾವುದನ್ನೆಲ್ಲಾ ವಿವರಿಸಿದ್ದಾನೋ ಅದರಿಂದ ಪಾಠಕಲಿಯುವುದು. ಅದಕ್ಕೆ ಪ್ರತಿಯಾಗಿ ಯಾರು ಆಜ್ಞೋಲ್ಲಂಘನೆ ಮಾಡುತ್ತಾನೋ, ನಿಷಿದ್ಧ ಕಾರ್ಯಗಳನ್ನು ಮಾಡುತ್ತಾನೋ, ಅಲ್ಲಾಹನ ಉಪದೇಶ ಮತ್ತು ಬೋಧನೆಗಳಿಂದ ಪಾಠ ಕಲಿಯುವುದಿಲ್ಲವೋ ಅವನು ಅಲ್ಲಾಹನ ಗ್ರಂಥದ ಕೆಟ್ಟ ತಾತ್ಪರ್ಯವನ್ನು ಅನುಸರಿಸಿದನು. ಅರ್ಥಾತ್, ಅಲ್ಲಾಹನ ಗ್ರಂಥ ಕೆಟ್ಟದ್ದೆಂದು ಸಾರಿದ ಅಂಶಗಳನ್ನು ಅನುಸರಿಸಿದನು.

57. ಅಥವಾ "ಅಯ್ಯೋ, ಅಲ್ಲಾಹನು ನನಗೆ ಮಾರ್ಗದರ್ಶನ ನೀಡಿರುತ್ತಿದ್ದರೆ ನಾನೂ ದೇವನಿಷ್ಠರಲ್ಲಾಗುತ್ತಿದ್ದೆ" ಎಂದು-

أَوْ تَقُولَ لَوْ أَنَّ اللّٰهَ هَدٰىنِيْ لَكُنْتُ مِنَ الْمُتَّقِيْنَ ﴿٥٧﴾

58. ಅಥವಾ ಯಾತನೆಯನ್ನು ಕಣ್ಣಾರೆ ಕಂಡು, "ಅಯ್ಯೋ ನನಗೆ ಇನ್ನೊಂದು ಅವಕಾಶ ಸಿಕ್ಕಿ ಬಿಟ್ಟರೆ ನಾನೂ ಸತ್ಕರ್ಮವೆಸಗುವವರಲ್ಲಾಗಿ ಬಿಡುತ್ತಿದ್ದೆ" ಎಂದು ಹೇಳುವಂತಾಗದಿರಲಿ.

أَوْ تَقُوْلَ حِيْنَ تَرَى الْعَذَابَ لَوْ أَنَّ لِيْ كَرَّةً فَأَكُوْنَ مِنَ الْمُحْسِنِيْنَ ﴿٥٨﴾

59. (ಆಗ ಅವನಿಗೆ) "ಏಕೆ? ನನ್ನ ವಚನಗಳು ನಿನ್ನ ಬಳಿಗೆ ಬಂದಿದ್ದುವು. ಅನಂತರ ನೀನು ಅವುಗಳನ್ನು ಸುಳ್ಳಾಗಿಸಿದೆ ಮತ್ತು ದುರಹಂಕಾರ ತೋರಿದೆ, ನೀನು ಸತ್ಯನಿಷೇಧಿಗಳಲ್ಲಾದೆ" (ಎಂಬ ಉತ್ತರ ಸಿಗುವಂತೆಯೂ ಆಗಬಾರದು).

بَلٰى قَدْ جَآءَتْكَ اٰيٰتِيْ فَكَذَّبْتَ بِهَا وَاسْتَكْبَرْتَ وَكُنْتَ مِنَ الْكٰفِرِيْنَ ﴿٥٩﴾

60. ಇಂದು ಅಲ್ಲಾಹನ ಮೇಲೆ ಸುಳ್ಳಾರೋಪ ಹೊರಿಸಿದವರ ಮುಖವು ಪುನರುತ್ಥಾನದಿನ ಕಪ್ಪಾಗಿ ಬಿಟ್ಟಿರುವುದನ್ನು ನೀವು ಕಾಣುವಿರಿ. ದುರಹಂಕಾರಿಗಳಿಗೆ ನರಕದಲ್ಲಿ ಸಾಕಷ್ಟು ಸ್ಥಳವಿಲ್ಲವೇ?

وَيَوْمَ الْقِيٰمَةِ تَرَى الَّذِيْنَ كَذَبُوْا عَلَى اللّٰهِ وُجُوْهُهُمْ مُّسْوَدَّةٌ ۗ أَلَيْسَ فِيْ جَهَنَّمَ مَثْوًى لِّلْمُتَكَبِّرِيْنَ ﴿٦٠﴾

61. ಇದಕ್ಕೆ ವ್ಯತಿರಿಕ್ತವಾಗಿ, ಇಲ್ಲಿ ದೇವಭಯವುಳ್ಳವರಾಗಿದ್ದ ಜನರ ವಿಜಯ ಸಾಧನಗಳ ಕಾರಣ, ಅಲ್ಲಾಹನು ಅವರಿಗೆ ಮೋಕ್ಷ ನೀಡುವನು. ಅಲ್ಲಿ ಅವರಿಗೆ ಯಾವ ಹಾನಿಯೂ ತಟ್ಟದು ಮತ್ತು ಅವರು ದುಃಖಿತರಾಗಲಾರರು.

وَيُنَجِّي اللّٰهُ الَّذِيْنَ اتَّقَوْا بِمَفَازَتِهِمْ ۖ لَا يَمَسُّهُمُ السُّوْٓءُ وَلَا هُمْ يَحْزَنُوْنَ ﴿٦١﴾

62. ಅಲ್ಲಾಹನು ಸಕಲ ವಸ್ತುಗಳ ಸೃಷ್ಟಿಕರ್ತನು ಮತ್ತು ಅವನೇ ಸಕಲ ವಸ್ತುಗಳ ಮೇಲ್ವಿಚಾರಕನಾಗಿರುವನು.

اَللّٰهُ خَالِقُ كُلِّ شَيْءٍ ۖ وَّهُوَ عَلٰى كُلِّ شَيْءٍ وَّكِيْلٌ ﴿٦٢﴾

63. ಭೂಮಿ-ಆಕಾಶಗಳ ಭಂಡಾರಗಳ ಬೀಗದ ಕೈಗಳು ಅವನ ವಶದಲ್ಲೇ ಇವೆ ಮತ್ತು ಅಲ್ಲಾಹನ ಸೂಕ್ತಗಳನ್ನು ನಿಷೇಧಿಸುವವರೇ ನಷ್ಟ ಹೊಂದುವವರಾಗಿದ್ದಾರೆ.

لَهٗ مَقَالِيْدُ السَّمٰوٰتِ وَالْاَرْضِ ۗ وَالَّذِيْنَ كَفَرُوْا بِاٰيٰتِ اللّٰهِ اُولٰٓئِكَ هُمُ الْخٰسِرُوْنَ ﴿٦٣﴾

64. (ಸಂದೇಶವಾಹಕರೇ) ಇವರೊಡನೆ ಹೇಳಿರಿ; "ತಿಳಿಗೇಡಿಗಳೇ, ನೀವು ಅಲ್ಲಾಹನ ಹೊರತು ಇತರರ ಆರಾಧನೆ ಮಾಡಲು ನನ್ನೊಡನೆ ಹೇಳುತ್ತೀರಾ?"

قُلْ اَفَغَيْرَ اللّٰهِ تَاْمُرُوْٓنِّيْٓ اَعْبُدُ اَيُّهَا الْجٰهِلُوْنَ ﴿٦٤﴾

65. (ನೀವು ಇದನ್ನು ಅವರೊಡನೆ ಸ್ಪಷ್ಟವಾಗಿ ಹೇಳಿ ಬಿಡಬೇಕು. ಏಕೆಂದರೆ) ನೀವು ಬಹು ದೇವತ್ವವೆಸಗಿದರೆ ನಿಮ್ಮ ಕರ್ಮವು ನಿರರ್ಥಕಗೊಳ್ಳುವುದು ಮತ್ತು ನೀವು ನಷ್ಟ ಹೊಂದುವವರಲ್ಲಾಗು

وَلَقَدْ اُوْحِيَ اِلَيْكَ وَاِلَى الَّذِيْنَ مِنْ قَبْلِكَ ۚ لَئِنْ اَشْرَكْتَ لَيَحْبَطَنَّ عَمَلُكَ

وَلَتَكُونَنَّ مِنَ الْخَاسِرِينَ ٦٥

ವಿರೆಂದು ನಿಮ್ಮ ಕಡೆಗೂ ನಿಮಗಿಂತ ಮುಂಚೆ ಗತಿಸಿದ ಸಕಲ ಪ್ರವಾದಿಗಳ ಕಡೆಗೂ 'ದಿವ್ಯವಾಣಿ' ಕಳುಹಿಸಲಾಗಿದೆ.

بَلِ اللَّهَ فَاعْبُدْ وَكُن مِّنَ الشَّاكِرِينَ ٦٦

66. ಆದುದರಿಂದ (ಸಂದೇಶವಾಹಕರೇ) ನೀವು ಕೇವಲ ಅಲ್ಲಾಹನ ಆರಾಧನೆಯನ್ನು ಮಾಡಿರಿ ಮತ್ತು ಕೃತಜ್ಞ ದಾಸರಲ್ಲಾಗಿರಿ.

وَمَا قَدَرُوا اللَّهَ حَقَّ قَدْرِهِ وَالْأَرْضُ جَمِيعًا قَبْضَتُهُ يَوْمَ الْقِيَامَةِ وَالسَّمَاوَاتُ مَطْوِيَّاتٌ بِيَمِينِهِ ۚ سُبْحَانَهُ وَتَعَالَىٰ عَمَّا يُشْرِكُونَ ٦٧

67. ಇವರು ಅಲ್ಲಾಹನನ್ನು ಗೌರವಿಸಬೇಕಾದ ರೀತಿಯಲ್ಲಿ ಗೌರವಿಸ ಲಿಲ್ಲ. (ಅವನೆಂತಹ ಮಹಿಮಾವಂತನೆಂದರೆ) ಪುನರುತ್ಥಾನ ದಿನ ಇಡೀ ಭೂಮಿಯು ಅವನ ಮುಷ್ಟಿಯೊಳಗಿರುವುದು ಮತ್ತು ಆಕಾಶಗಳು ಅವನ ಬಲಗೈಯಲ್ಲಿ ಸುತ್ತಿಕೊಂಡಿರುವುವು.[11] ಇವರು ಮಾಡುತ್ತಿರುವ ಬಹು ದೇವತ್ವದಿಂದ ಅವನು ಪಾವನನೂ ಅತ್ಯುನ್ನತನೂ ಆಗಿರುತ್ತಾನೆ.

وَنُفِخَ فِي الصُّورِ فَصَعِقَ مَن فِي السَّمَاوَاتِ وَمَن فِي الْأَرْضِ إِلَّا مَن شَاءَ اللَّهُ ۖ ثُمَّ نُفِخَ فِيهِ أُخْرَىٰ فَإِذَا هُمْ قِيَامٌ يَنظُرُونَ ٦٨

68. ಅಂದು ಸೂರ್ (ಕಹಳೆ) ಊದಲ್ಪಡುವುದು ಮತ್ತು ಅಲ್ಲಾಹ್ ಯಾರನ್ನು ಜೀವಂತವಾಗಿರಿಸಲಿಚ್ಛಿಸುವನೋ ಅವನ ಹೊರತು ಭೂಮಿ-ಆಕಾಶಗಳಲ್ಲಿರುವವರೆಲ್ಲರೂ ಸತ್ತು ಬೀಳುವರು. ತರುವಾಯ ಇನ್ನೊಂದು ಕಹಳೆ ಊದಲ್ಪಡುವುದು ಮತ್ತು ಒಮ್ಮೆಲೇ ಎಲ್ಲರೂ ಎದ್ದು ನೋಡ ತೊಡಗುವರು.

وَأَشْرَقَتِ الْأَرْضُ بِنُورِ رَبِّهَا وَوُضِعَ الْكِتَابُ وَجِيءَ بِالنَّبِيِّينَ وَالشُّهَدَاءِ وَقُضِيَ بَيْنَهُم بِالْحَقِّ وَهُمْ لَا يُظْلَمُونَ ٦٩

69. ಭೂಮಿಯು ತನ್ನ ಪ್ರಭುವಿನ ಜ್ಯೋತಿಯಿಂದ ಬೆಳಗುವುದು. ಕರ್ಮಗ್ರಂಥವು ತಂದಿರಿಸಲ್ಪಡುವುದು. ಪ್ರವಾದಿಗಳೂ ಎಲ್ಲ ಸಾಕ್ಷಿಗಳೂ ಹಾಜರುಗೊಳಿಸಲ್ಪಡುವರು. ಜನರ ನಡುವೆ ಸರಿಯಾಗಿ ನ್ಯಾಯಸಹಿತ ತೀರ್ಮಾನ ಮಾಡಿ ಬಿಡಲಾಗುವುದು. ಅವರ ಮೇಲೆ ಯಾವ ಅಕ್ರಮವೂ ಆಗದು-

وَوُفِّيَتْ كُلُّ نَفْسٍ مَّا عَمِلَتْ وَهُوَ أَعْلَمُ بِمَا يَفْعَلُونَ ٧٠

70. ಮತ್ತು ಪ್ರತಿಯೊಬ್ಬ ವ್ಯಕ್ತಿಗೂ ಅವನು ಮಾಡಿದ್ದ ಕರ್ಮಗಳ ಸರ್ವಸಂಪೂರ್ಣ ಪ್ರತಿಫಲ ನೀಡಲಾಗುವುದು. ಜನರು ಮಾಡುತ್ತಿರುವುದೆಲ್ಲವನ್ನೂ ಅಲ್ಲಾಹನು ಚೆನ್ನಾಗಿ ಅರಿತಿರುತ್ತಾನೆ.

11. ಭೂಮಿ-ಆಕಾಶಗಳಲ್ಲಿ ಅಲ್ಲಾಹನಿಗೆ ಪರಮಾಧಿಕಾರವಿದೆ ಎಂಬ ಚಿತ್ರಣವನ್ನು ನೀಡಲಿಕ್ಕಾಗಿ 'ಮುಷ್ಟಿಯೊಳಗಿರುವ' ಮತ್ತು 'ಕೈಯಲ್ಲಿ ಸುತ್ತಿಕೊಂಡಿರುವ' ಅಲಂಕಾರವನ್ನು ಬಳಸಲಾಗಿದೆ. ವ್ಯಕ್ತಿ ಸಣ್ಣ ಚೆಂಡೊಂದನ್ನು ಅಂಗೈಯಲ್ಲಿ ಅದುಮಿ ಹಿಡಿಯುತ್ತಾನೆ. ಅವನ ಪಾಲಿಗೆ ಇದೊಂದು ಸುಲಭದ ಕೆಲಸವಾಗಿದೆ. ಹಾಗೆಯೇ ಒಬ್ಬ ವ್ಯಕ್ತಿ ಕರವಸ್ತ್ರವನ್ನು ಕೈಗೆ ಸುತ್ತಿಕೊಳ್ಳುತ್ತಾನೆ. ಅವನ ಪಾಲಿಗೆ ಅದು ತ್ರಾಸದಾಯಕ ಕೆಲಸವೇನೂ ಅಲ್ಲ. ಹಾಗೆಯೇ ಅಲ್ಲಾಹನ ಮಹಾನತೆ ಮತ್ತು ಹಿರಿತನವನ್ನು ಅಂದಾಜಿಸಲು ಅಶಕ್ತರಾದ ಮಾನವರೆಲ್ಲರೂ ನಿರ್ಣಾಯಕ ದಿನದಂದು ಭೂಮಿ-ಆಕಾಶಗಳು ಅಲ್ಲಾಹನ ಸಾಮರ್ಥ್ಯದ ಮುಂದೆ ಕ್ಷುಲ್ಲಕವಾದ ಚೆಂಡು ಅಥವಾ ಸಣ್ಣ ಕರವಸ್ತ್ರದಂತೆ ಆಗಿ ಬಿಡುವುದನ್ನು ಕಣ್ಣಾರೆ ಕಾಣುವರು.

71. (ಈ ತೀರ್ಮಾನದ ಬಳಿಕ) ಸತ್ಯನಿಷೇಧಿಗಳು ಗುಂಪು ಗುಂಪುಗಳಾಗಿ ನರಕದ ಕಡೆಗೆ ಅಟ್ಟಲ್ಪಡುವರು. ಅವರು ಅಲ್ಲಿಗೆ ತಲುಪಿದಾಗ ಅದರ ದ್ವಾರಗಳು ತೆರೆಯಲ್ಪಡುವುವು ಮತ್ತು ಅದರ ಕಾವಲು ಗಾರರು ಅವರೊಡನೆ, "ನಿಮಗೆ ನಿಮ್ಮ ಪ್ರಭುವಿನ ವಚನಗಳನ್ನು ತಿಳಿಸುವ ಹಾಗೂ ನಿಮಗೊಮ್ಮೆ ಈ ದಿನವನ್ನೂ ಕಾಣ ಬೇಕಾಗುವುದೆಂದು ಎಚ್ಚರಿಸುವ ಸಂದೇಶವಾಹಕರು ನಿಮ್ಮೊಳ ಗಿಂದಲೇ ನಿಮ್ಮ ಕಡೆಗೆ ಬಂದಿರಲಿಲ್ಲವೇ?" ಎಂದು ಕೇಳುವರು. ಅವರು ಹೀಗೆ ಉತ್ತರ ಕೊಡುವರು; "ಹೌದು ಬಂದಿದ್ದರು, ಆದರೆ ಯಾತನೆಯ ತೀರ್ಮಾನವು ಸತ್ಯನಿಷೇಧಿಗಳನ್ನು ಅಂಟಿ ಕೊಂಡಿತು."

وَسِيقَ الَّذِينَ كَفَرُوا إِلَىٰ جَهَنَّمَ زُمَرًا ۖ
حَتَّىٰ إِذَا جَاءُوهَا فُتِحَتْ أَبْوَابُهَا وَ
قَالَ لَهُمْ خَزَنَتُهَا أَلَمْ يَأْتِكُمْ رُسُلٌ
مِّنكُمْ يَتْلُونَ عَلَيْكُمْ آيَاتِ رَبِّكُمْ
وَيُنذِرُونَكُمْ لِقَاءَ يَوْمِكُمْ هَٰذَا ۚ
قَالُوا بَلَىٰ وَلَٰكِنْ حَقَّتْ كَلِمَةُ
الْعَذَابِ عَلَى الْكَافِرِينَ ﴿٧١﴾

72. ಆಗ ಅವರೊಡನೆ, "ನರಕದ ದ್ವಾರಗಳಲ್ಲಿ ಪ್ರವೇಶಿಸಿರಿ. ಇನ್ನು ನಿಮಗೆ ಇಲ್ಲೇ ಸದಾಕಾಲ ಇರಬೇಕಾಗಿದೆ. ದುರಹಂಕಾರಿ ಗಳಿಗಾಗಿರುವ ಅತ್ಯಂತ ಕೆಟ್ಟ ನಿವಾಸವಿದು" ಎನ್ನಲಾಗುವುದು.

قِيلَ ادْخُلُوا أَبْوَابَ جَهَنَّمَ خَالِدِينَ
فِيهَا ۖ فَبِئْسَ مَثْوَى الْمُتَكَبِّرِينَ ﴿٧٢﴾

73. ತಮ್ಮ ಪ್ರಭುವಿನ ಆಜ್ಞೋಲ್ಲಂಘನೆಯಿಂದ ದೂರವಿರುತ್ತಿದ್ದವ ರನ್ನು ಗುಂಪು ಗುಂಪುಗಳಾಗಿ ಸ್ವರ್ಗದ ಕಡೆಗೆ ಒಯ್ಯಲಾಗುವುದು. ಅವರು ಅಲ್ಲಿಗೆ ತಲಪುವಾಗ ಅದರ ದ್ವಾರಗಳು ಮೊದಲೇ ತೆರೆದಿರಿಸಲ್ಪಟ್ಟಿರುವುವು. ಆಗ ಅದರ ವ್ಯವಸ್ಥಾಪಕರು ಅವರೊಡನೆ, "ನಿಮಗೆ ಸಲಾಮ್ (ನಿಮ್ಮ ಮೇಲೆ ಶಾಂತಿ ಇರಲಿ) ಬಹಳ ಚೆನ್ನಾಗಿದ್ದಿರಿ. ಇದರೊಳಗೆ ಸದಾಕಾಲಕ್ಕಾಗಿ ಪ್ರವೇಶಿಸಿಕೊಳ್ಳಿರಿ" ಎನ್ನುವರು.

وَسِيقَ الَّذِينَ اتَّقَوْا رَبَّهُمْ إِلَى الْجَنَّةِ
زُمَرًا ۖ حَتَّىٰ إِذَا جَاءُوهَا وَفُتِحَتْ
أَبْوَابُهَا وَقَالَ لَهُمْ خَزَنَتُهَا سَلَامٌ
عَلَيْكُمْ طِبْتُمْ فَادْخُلُوهَا خَالِدِينَ ﴿٧٣﴾

74. ಆಗ ಇವರು ಹೇಳುವರು; "ನಮ್ಮೊಂದಿಗೆ ತನ್ನ ವಾಗ್ದಾನವನ್ನು ಸತ್ಯಗೊಳಿಸಿದ ಹಾಗೂ ನಮ್ಮನ್ನು ಭೂಮಿಯ ವಾರೀಸುದಾರರಾಗಿ ಮಾಡಿದ ಅಲ್ಲಾಹನಿಗೆ ಕೃತಜ್ಞತೆಗಳು. ಇನ್ನು ನಾವು ಸ್ವರ್ಗದಲ್ಲಿ ನಮಗಿಷ್ಟ ಬಂದ ಕಡೆ ನಮ್ಮ ನಿವಾಸ ಮಾಡಿಕೊಳ್ಳಬಹುದು." ಹೀಗೆ, ಕರ್ಮವೆಸಗುವವರಿಗೆ ಅತ್ಯುತ್ತಮ ಪ್ರತಿಫಲವಿದೆ.

وَقَالُوا الْحَمْدُ لِلَّهِ الَّذِي صَدَقَنَا
وَعْدَهُ وَأَوْرَثَنَا الْأَرْضَ نَتَبَوَّأُ مِنَ
الْجَنَّةِ حَيْثُ نَشَاءُ ۖ فَنِعْمَ أَجْرُ الْعَامِلِينَ ﴿٧٤﴾

75. ದೇವಚರರು 'ವಿಶ್ವಸಿಂಹಾಸನದ' ಸುತ್ತಲೂ ಸಾಲುಗಟ್ಟಿ ತಮ್ಮ ಪ್ರಭುವಿನ ಪ್ರಶಂಸೆ ಮತ್ತು ಕೀರ್ತನೆ ಮಾಡುತ್ತಿರುವುದನ್ನು ನೀವು ನೋಡುವಿರಿ ಮತ್ತು ಜನರ ನಡುವೆ ಸರಿಯಾಗಿ ನ್ಯಾಯ ಪೂರ್ಣ ತೀರ್ಮಾನ ಮಾಡಿಬಿಡಲಾಗುವುದು ಮತ್ತು ಸರ್ವಲೋಕ ಪಾಲಕನಾದ ಅಲ್ಲಾಹನಿಗೇ ಸಕಲ ಸ್ತೋತ್ರಗಳೂ ಮೀಸಲೆಂದು ಸಾರಿ ಹೇಳಲಾಗುವುದು.

وَتَرَى الْمَلَائِكَةَ حَافِّينَ مِنْ حَوْلِ
الْعَرْشِ يُسَبِّحُونَ بِحَمْدِ رَبِّهِمْ ۖ
وَقُضِيَ بَيْنَهُم بِالْحَقِّ وَقِيلَ الْحَمْدُ
لِلَّهِ رَبِّ الْعَالَمِينَ ﴿٧٥﴾